ವಿ. ಹಮೀದ್, ವಿಟ್ಲ
ಹದಿಹರೆಯದ ತರುಣಿ ನಗುತ್ತಿದ್ದಾಳೆ, ಪ್ರೀತಿಸುವುದಿಲ್ಲ. ಏನು ಮಾಡಲಿ?



ಮಂಗನಾಟ ನಿಲ್ಲಿಸಿ; ಕೋತಿಯಾಟ ಕಂಡಾಗ ಬರುವುದು ನಗು, ಪ್ರೀತಿಯಲ್ಲ!

ಬಿ. ಚಂದ್ರೇಗೌಡ, ಬೆಂಗಳೂರು
ಮನವರಿಕೆಗೂ, ಕನವರಿಕೆಗೂ ಏನು ವ್ಯತ್ಯಾಸ?
ಕೈಹಿಡಿಯುವ ಮುಂಚಿನದು ಕನವರಿಕೆ; ನಂತರದ್ದು ಮನವರಿಕೆ.

ಅನಸೂಯ ಟಿ, ಕೇದಿಗೆಮನೆ
ಅವಳ್ಳುದ್ದಿ ಇವಳಿಗೆ, ಇವಳ್ಳುದ್ದಿ ಅವಳಿಗೆ ಹೇಳಿ ಮಳ್ಳಿಯಂತೆ ಕೂತ ಕಳ್ಳಿಗೆ ಏನು ತಗೊಂಡು ಹೊಡೀಬೇಕು?
ಓಹ್! ನ್ಯೂಸ್ ಚಾನಲ್ಲಲ್ವಾ... ಕೋರ್ಟಿಂದ ಡಿಕ್ರಿ ತೊಗೊಂಡು ಬೀಗ ಜಡೀಬೇಕು.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಹೆಣ್ಣಿನ ಮನಸ್ಸು ಹೂವಿನಂತೆ ಇರುವುದಂತೆ. ಹೌದಾ ಸರ್?



ಹೌದು. ಕೊಂಚ ಶಾಖ ತಟ್ಟಿದರೂ ಮುದುಡುತ್ತದೆ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ಕರ್ಮದ ಮರ್ಮವೇನು ಸರ್?
ಯೋಚನೆಯಲ್ಲಿ ಕರಿಯೂ, ಆಚರಣೆಯಲ್ಲಿ ಮದವೂ ಇರಬಾರದೆಂಬ ಮರ್ಮರ.

ರಾಜೀವ್ ಎನ್. ಮಾಗಲ್, ಸಕಲೇಶಪುರ
ಬದುಕಿರುವಾಗ ವಿಶ್ವಾಸ ತೋರದೆ ಕಾಲವಾದಾಗ ತುಳಸಿ ಹಾರ ಹಾಕಿದರೆ ಅದು ಸೌಹಾರ್ದದ ಸಂಕೇತವೆ?
ಊಹೂಂ. ಅದು ಆತ್ಮಕ್ಕೆ ಮೇಲೇರಲು ಗ್ರೀನ್ ಸಿಗ್ನಲ್ ಅಂತೆ.

ಎಂ.ಎ. ಕುಮಾರ್, ಬೆಂಗಳೂರು
ಮಂತ್ರಿಯ ಮಡದಿಗೆ ಏನೇನು ಆಸೆಗಳಿರುತ್ತವೆ?
ಬರುವಷ್ಟೆಲ್ಲ ಬರಲಿ... ಲೋಕಾಯುಕ್ತದ ದಯೆ ಇರಲಿ.

ವಿ. ಹೇಮಂತಕುಮಾರ್, ಬೆಂಗಳೂರು
ಲೇಡೀಸ್ ಫಿಂಗರ್ ಬೆಂಡೆಕಾಯಿ. ಜೆಂಟ್ಸ್ ಫಿಂಗರ್?
ಅವಳ ಆದೇಶಗಳನ್ನು ನಿಭಾಯಿಸೀ ನಿಭಾಯಿಸೀ ಹಣ್ಣುಗಾಯಿ ನೀರುಗಾಯಿ.

ಜಯತೀರ್ಥ ಶ್ರೀಪತಿ, ಹುಬ್ಬಳ್ಳಿ
ಪ್ರತಿ ರಾಜಕಾರಣಿಯ ಸುತ್ತ ಹತ್ತು ಜನ ಸೇರಿರುತ್ತಾರೆ. ಏಕೆ ಸರ್?
ತಿಪ್ಪೆಯ ಸುತ್ತ ನೊಣಗಳಿರುವುದು ಸಹಜ.

ಮಲ್ಲಿಕಾರ್ಜುನ, ಸುರಧೇನುಪುರ
ಕೆಲವು ಆರೋಪಿಗಳು ಕೋರ್ಟಿನಲ್ಲಿ ಆರೋಪ ಸಾಬೀತಾಗುವ ಮುನ್ನವೇ ಇಹಲೋಕ ತ್ಯಜಿಸುವರು. ಏಕೆ?
ಮೇಲಿನ ಕೋರ್ಟ್ ಕಳುಹಿಸಿರುವ ಸಮನ್ಸಿಗೆ ಹಾಜರಾಗಲೇಬೇಕಲ್ಲ.

ಕೃಷ್ಣ ಕೊಡಂಚ, ಬೆಂಗಳೂರು
ಗೂಢ ಮತ್ತು ನಿಗೂಢ; ಇವುಗಳ ನಡುವಿನ ವ್ಯತ್ಯಾಸವೇನು?
ಗೂಢಕ್ಕೆ ಚಾರರಿದ್ದಾರೆ; ನಿಗೂಢಕ್ಕೆ ಇಲ್ಲ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಒಗಟಿಗೂ, ಹೆಣ್ಣಿಗೂ ವ್ಯತ್ಯಾಸವೇನು?
ಒಗಟು ಒಮ್ಮೆಯಷ್ಟೇ ವಿಸ್ಮಯ. ಹೆಣ್ಣು ಚಿರವಿಸ್ಮಯ.

ಎಂ.ಸಿ. ಧನ್ಯತಾ, ಬೆಂಗಳೂರು
ಗುರುವನ್ನು ಆಚಾರ್ಯ ಎಂದು ಕರೆಯುವುದೇಕೆ?
ಶಿಸ್ತು, ಶ್ರದ್ಧೆ, ಅಧ್ಯಯನ, ಅಧ್ಯಾಪನ; ಈ ಚಾರು ಚರ್ಯೆಗಳು ಇರುವುದರಿಂದ.

ಅಮರಯ್ಯಾ ಪತ್ರಿಮಠ, ಸುರಪುರ
ಸಂಸಾರವು ವಿಮೋಚನೆಯೋ, ಬಂಧನವೋ?
ಒಲವಿನ ಎಳೆಗಳಿಂದ ನೇಯ್ದ ರಕ್ಷಾಬಂಧನ.

## ಬಹುಮಾನಿತ ಪ್ರಶ್ನೆ

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
ಮರಗಳಲ್ಲಿ ಒಂದೇ ತರಹದ ಹೂವು ಹಣ್ಣುಗಳು ಹುಟ್ಟುತ್ತವೆ. ಮಾತೃಗರ್ಭದಲ್ಲಿ ಹುಟ್ಟಿದ ಮಕ್ಕಳಿಗೇಕೆ ವಿಭಿನ್ನ ಗುಣ?
ಅಲ್ಲಿ ಅದೇ ನೀರು, ಗಾಳಿ, ಮಣ್ಣಿನ ಸಹವಾಸ. ಇಲ್ಲಿ ಒಂದೊಂದು ಮಗುವಿಗೂ ಒಂದೊಂದು ಪರಿಸರ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ನೀರಿದ್ದ ಬಾವಿಗೂ, ನೀರಿಲ್ಲದ ಬಾವಿಗೂ ಏನು ವ್ಯತ್ಯಾಸ?
ಇದು ಜಳಕಕ್ಕೆ ಪೂರಕ, ಅದು (ಸದನದ್ದು) ಜಗಳಕ್ಕೆ ಪ್ರೇರಕ.

ಪಿ. ಶಂಕರಪ್ಪ, ಶಿವಮೊಗ್ಗ
ಎಲ್ಲಾ ರಂಗದಲ್ಲೂ ಯಾರನ್ನು ಕೇಳಿದರೂ ಜನರದ್ದೇ ತಪ್ಪು ಎನ್ನುತ್ತಾರಲ್ಲಾ?
ಹಾಗೆ ಹೇಳಲು ಪ್ರೇರಣೆ ಅವರ ದೋಷಭರಿತ ನಜರದ್ದೇ.

ಪಿ.ಜಿ. ರಾಘವೇಂದ್ರ, ಮೈಸೂರು
ಕುಡುಕರನ್ನು ಮದ್ಯಾರ್ಥಿಗಳು ಎನ್ನಬಹುದೇ?



ಓ! ಅವರು ಈ ಫಾರಮ್‌ಗೆ ಸೇರಿದವರೇ.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಜೀವನದ ಆಶೆ ಕೊನೆಗೊಳ್ಳುವುದು ಯಾವಾಗ?
ಜೀನ ಆಗದೆ ಜಿನ ಆದಾಗ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಸಾವಿರಾರು ರೂಗಳ ಪಟಾಕಿ ಸುಡುವ ನಾವು ಸಾವಿರಾರು ರೂಪಾಯಿಗಳ ನೋಟುಗಳನ್ನೇಕೆ ಸುಡುವುದಿಲ್ಲ?
ಹಾಗೆ ಸುಟ್ಟರೆ ಮನೆಯವರಿಂದ ಫೈರ್ ವರ್ಕ್ಸ್ ಶುರುವಾಗುವುದಲ್ಲ!

■ ರಾಮ್